19

# ಪರಲೋಕವು ಇರುವುದೋ?

ಒಂದು ಸಲ ದೇವರ ಅಸ್ತಿತ್ವವು ಸ್ಥಾಪಿಸಲ್ಪಟ್ಟರೆ, ಮುಂದಿನ ಪ್ರಶ್ನೆಯು "ಪರಲೋಕವು ಇರುವುದೋ?" ಎಂಬುದಾಗಿರುವುದು. ಈ ಕೆಲಗಿನ ವಿಚಾರಗಳನ್ನು ಯೋಚಿಸಿರಿ.

## ಪರಲೋಕವು ಇಲ್ಲದಿದ್ದರೆ, ದೇವರು ಬುದ್ಧಿಯಿಲ್ಲದವನಾಗುತ್ತಾನೆ

ದೇವರ ಪುಸ್ತಕವು ಬೆಲೆಯುಳ್ಳ ಫಲವನ್ನು ಜನರು ಹೇಗೆ ಬೆಳೆಸಿಕೊಳ್ಳಬೇಕೆಂಬುದನ್ನು ಬೋಧಿಸಿರುತ್ತದೆ: "ಪ್ರೀತಿ, ಸಂತೋಷ, ಸಮಾಧಾನ, ಧೀರ್ಘಶಾಂತಿ, ದಯೆ, ಉಪಕಾರ, ನಂಬಿಕೆ, ಸಾಧುತ್ವ, ಶಮೆದಮೆ ಇಂಥವುಗಳೇ" (ಗಲಾತ್ಯ 5:22, 33). ಅನೇಕ ಜನರು ಈ ಒಂಭತ್ತು ರೀತಿಯ ಫಲವನ್ನು ಉತ್ಪಾದಿಸಲು ತೀರ್ಮಾನಿಸಿ ಜಯಹೊಂದಿದ್ದಾರೆ.

ಪುನಃ ಹುಟ್ಟಿದ ಪಾಪಿಗಳು ಫಲಫಲಿಸುವ ಕ್ರೈಸ್ತರಾಗುವಾಗ ಅವರಿಂದ ಮಾಡಲ್ಪಡುವ ಆಮೂಲಾಗ್ರ ಬದಲಾವಣೆಯು ಒಂದು ಮ್ಯಾಗಜೀನ ಲೇಖನದಲ್ಲಿ ಸ್ಪಷ್ಟವಾಗಿ ವಿವರಿಸಲ್ಪಟ್ಟಿದೆ: "ಒಣಗಿದ ಬೀಜವನ್ನು, ಸುವಾಸನೆಯುಳ್ಳ ಹೂವುಗಳು ಮತ್ತು ಸಿಹಿಯಾದ ಫಲಗಳೊಂದಿಗೆ ತುಂಬಿದ ಮರವಾಗಿರುವುದರೊಂದಿಗೆ ಹೋಲಿಸು.[1] ಪ್ರತಿಷ್ಠಿತ ಕ್ರೈಸ್ತರಿಂದ ಪ್ರಸರಿಸಲ್ಪಟ್ಟ ಪರಿಮಳವು ಇತರರು ಅವರ ಸಹವಾಸವನ್ನು ಹುಡುಕುವಂತೆ ಮಾಡುತ್ತದೆ.

ಹಾಗಿದ್ದರೂ, ಒಳ್ಳೆಯ ಫಲವನ್ನು ಹೇಗೆ ಬೆಳೆಯಬೇಕೆಂದು ದೇವರು ಪಾಪಿಗಳಿಗೆ ಕಲಿಸಿದ ನಂತರ, ಅನಿವಾರ್ಯವಾಗಿಯೂ ಅಂತಿಮವಾಗಿಯೂ ಅವರೆಲ್ಲರೂ ಸತ್ತು ಹೋಗುವರು. ಪರಲೋಕವು ಇಲ್ಲದಿದ್ದರೆ, ಆ ಜನರು ಸತ್ತವರಾಗಿಯೇ ಉಳಿಯುವರು, ಅದು ಅವರ ಸೃಷ್ಟಿಕರ್ತನನ್ನು ಬುದ್ಧಿಹೀನನ್ನಾಗಿ ಮಾಡುವುದು, ಆತನು ಜನರನ್ನು ಯಾಕೆ ಉಂಟುಮಾಡಿದನು, ಅತ್ಯುತ್ತಮವಾದ ಫಲವನ್ನು ಉತ್ಪಾದಿಸುವುದು ಹೇಗೆ ಎಂಬುದನ್ನು ಅವರಿಗೆ ಕಲಿಸಿ, ಅನಂತರ ಅವರು ಸದಾಕಾಲಕ್ಕೂ ಸತ್ತು ಹೋಗುವಂತೆ ಬಿಡುವುದೋ? ಜನರಲ್ ಮೋಟರ್ಸ್ ಅಧಿಕಾರಿಗಳಿಗೆ ಅಂಥ ದೇವರಿಗಿಂತ ಹೆಚ್ಚು ಬುದ್ಧಿಯಿದೆ, ಯಾಕಂದರೆ ಅವರು ಸುಂದರವಾದ ಹಾಗೂ ಬಲವಾದ ಕ್ಯಾಡಿಲ್ಯಾಕ ಕಾರನ್ನು ಉತ್ಪಾದಿಸಿ, ಅದನ್ನು ಡೆಟ್ರೊಯಿಟ್ ನದಿಯಲ್ಲಿ ನಡಿಸಿ ಅದು ಮುಳುಗಿ ಹೋಗುವಂತೆ ಮಾಡಲು ಎಂಜಿನೀಯರರನ್ನೂ ಜಾಣ ಕೆಲಸದವರನ್ನೂ ನೇಮಿಸುವದಿಲ್ಲ.

## ಪರಲೋಕವು ಇಲ್ಲದಿದ್ದರೆ, ದೇವರು ನೀತಿಯಿಲ್ಲದವನಾಗುತ್ತಿದ್ದನು

ಪ್ರೀತಿಯ ದೊಡ್ಡಸ್ತಿಕೆಯ ಬಗ್ಗೆ ಜನರಿಗೆ ದೇವರ ಬೋಧನೆಯಲ್ಲಿ "ಪ್ರಾಣವನ್ನೇ ಸ್ನೇಹಿತರಿಗೋಸ್ಕರ ಕೊಡುವ ಪ್ರೀತಿಗಿಂತ ಹೆಚ್ಚಿನ ಪ್ರೀತಿಯು ಯಾವದೂ ಇಲ್ಲ" (ಯೋಹಾನ 15:13) ಎಂದು ಯೇಸು ಹೇಳುವಂತೆ ಮಾಡಿದ್ದಾನೆ. ಎರಡನೆಯ ಜಾಗತಿಕ ಮಹಾಯುದ್ಧದಲ್ಲಿ, ಅಮೇರಿಕನ್ ಸೈನಿಕರ ಟ್ರೆಂಚಿನೊಳಗೆ ಜರ್ಮನ್ನರಿಂದ

ಸಜೀವ ಗ್ರೆನೇಡ ಎಸೆಯಲ್ಪಿಟ್ಟಾಗ ಅಂಥ ಪ್ರೀತಿಯು ಪ್ರದರ್ಶಿಸಲ್ಪಟ್ಟಿತು. ಅದು ಸ್ಫೋಟಗೊಳ್ಳುವ ಮೊದಲು, ಒಬ್ಬ ಸೈನಿಕನು ಗ್ರೆನೇಡಿನ ಮೇಲೆ ಬಿದ್ದು ಕೊಂಡನು. ಅದು ಸ್ಫೋಟಗೊಂಡಾಗ, ಅವನು ತಕ್ಷಣವೇ ಕೊಲ್ಲಲ್ಪಟ್ಟನು, ಆದರೆ ಅವನು ತನ್ನ ಎರಡೂ ಪಕ್ಕಗಳಲ್ಲಿದ್ದ ಸೈನಿಕರ ಪ್ರಾಣಗಳನ್ನು ರಕ್ಷಿಸಿದನು. ಪರಲೋಕವು ಇರದಿದ್ದರೆ, ಶೂರನಾದ ಹಾಗೂ ಸ್ವಾರ್ಥರಹಿತನಾದ ಆ ಸೈನಿಕನು ಕೊಲೆಗಾರನಾದ ಹಿಟ್ಲರನಂತೆ ಅದೇ ಬಹುಮಾನವನ್ನು, ಇಬ್ಬರೂ ಸದಾಕಾಲಕ್ಕೂ ಸತ್ತುಹೋಗುವದನ್ನು ಪಡೆದು ಕೊಳ್ಳುತ್ತಿದ್ದನು. ಆ ರೀತಿಯಲ್ಲಿ ಜನರನ್ನು ನಡಿಸುವ ದೇವರಿಗೆ ನೈತಿಕತೆಗಳು ಇರುವದಿಲ್ಲ.

## ಪರಲೋಕವು ಇಲ್ಲದಿದ್ದರೆ, ದೇವರು ಕ್ರೂರನಾಗಿರುತ್ತಾನೆ

ಜನರ ಹೃದಯಗಳಲ್ಲಿ ದೇವರು “ನಿತ್ಯತ್ವವನ್ನು ಇಟ್ಟಿದ್ದಾನೆ” (ಪ್ರಸಂಗಿ 3:11). ಆ ಕಾರಣದಿಂದ ಯಾವುದೇ ಸಾಧಾರಣ ವ್ಯಕ್ತಿಯು ಎಂದೆಂದಿಗೂ ಸಾಯಲು ಬಯಸುವದಿಲ್ಲ, ಆದರೆ ಸುಖಕರವಾದ, ಅಂತ್ಯವಿಲ್ಲದ ಅಸ್ತಿತ್ವದ, “ನಿತ್ಯಜೀವ”ಕ್ಕಾಗಿ ಬಯಸುತ್ತಾನೆ (ತೀತ 1:2). ಅಂಥ ಆನಂದಕರವಾದ ಭವಿಷ್ಯಕ್ಕೆ ದೇವರು ಸ್ಥಳ ಒದಗಿಸದಿದ್ದರೆ, ಆತನು ನಮ್ಮ ಹೃದಯಗಳಲ್ಲಿ ನಿತ್ಯತ್ವವನ್ನು ಇಡುವದರಲ್ಲಿ ಕೀಳಾದವನಾಗಿರುತ್ತಿದ್ದನು.

## ಪರಲೋಕವು ಇದ್ದರೆ, ನರಕವೂ ಇರುತ್ತದೆ

ಬುದ್ಧಿ ಹೀನನಲ್ಲದ, ಅನೈತಿಕತೆಯಿಲ್ಲದ, ಕ್ರೂರನಲ್ಲದ, ಪ್ರೀತಿಯುಳ್ಳ ದೇವರು ಹಾಗೂ ನಮ್ಮೆಲ್ಲರಿಗಿಂತ ಹೆಚ್ಚು ಬುದ್ಧಿವಂತನಾಗಿರುವಾತನು, “ನಿತ್ಯ ಬೆಂಕಿಯಿರುವ” (ಮತ್ತಾಯ 25:41) ಸ್ಥಳವು ಕೆಲವು ಜನರಿಗೆ ಸರಿಯಾದ ಸ್ಥಳವಾಗಿರುವದೆಂದು ತಿಳಿದಿರುತ್ತಾನೆ. ನರಕವು ಪರಲೋಕವು ನಿಜವಾದದ್ದಾಗಿರುವಂತೆಯೇ ಇರುವುದು ಎಂಬುದನ್ನು ನಾವು ತಿಳಿಯದೇ ಇದ್ದರೂ ನಾವು ದೇವರ ಒಳ್ಳೆಯತನವನ್ನು ಖಂಡಿಸಲು ಇಲ್ಲವೇ ಆತನನ್ನು ಶೀಕಿಸಲು ಧೈರ್ಯಗೊಳ್ಳದಷ್ಟು ಅನೇಕ ಪುರಾವೆಗಳನ್ನು ನಾವು ನೋಡಿದ್ದೇವೆ.

ಆತನು ಮಾಡಬೇಕಾಗಿರದೇ ಇರುವಾಗ ಆತನು ನಮ್ಮನ್ನು ಅಸ್ತಿತ್ವದಲ್ಲಿ ತಂದನು ಮತ್ತು ಪಾಪಿಗಳಿಗಾಗಿ ಆತನು ಪ್ರೀತಿಯನ್ನು ಪ್ರಕಟಿಸಿದನು (ರೋಮಾಪುರ 3:23), ಅದು ಇಡೀ ಜಗತ್ತಿಗೆ ವಿಸ್ತರಿಸಲ್ಪಡುತ್ತದೆ (ಯೋಹಾನ 3:16; 1 ಯೋಹಾನ 2:2). ಆತನು ಪ್ರೀತಿ ಸ್ವರೂಪನು (1 ಯೋಹಾನ 4:8, 16) ಮತ್ತು ನ್ಯಾಯ ತೀರ್ವಿಕೆಯ ದಿನದಂದು ಆತನು ತಪ್ಪನ್ನು ಮಾಡುವದಿಲ್ಲ. ನರಕಕ್ಕೆ ಜನರನ್ನು ಕಳುಹಿಸುವುದು ಆತನ ಹೃದಯಕ್ಕೆ ದುಃಖವನ್ನುಂಟು ಮಾಡುತ್ತದೆ (ಯೆಹೆಜ್ಕೇಲ 33:11).

ಟಿಪ್ಪಣಿ

[1]Adapted from David Van Biema, “Does Heaven Exist?” *Time* (24 March 1997): 70-78.

© 2009 Truth for Today